ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ, ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/41/2016-17. ದಿನಾಂಕ:20-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕೆ.ಕೊಟ್ರೇಶಪ್ಪ ತಂದೆ ಲೇಟ್ ಕೊಟ್ರಗೌಡ್ರ<br>ಕೊಟ್ರಬಸಪ್ಪ<br>ಹರಾಳು ಗ್ರಾಮ ಕೂಡ್ಲಿಗಿ ತಾಲೂಕು<br>2)ಸುಬ್ಬರತ್ನಮ್ಮ ಗಂಡ ವೆಂಕಟಪ್ಪ ಶೆಟ್ರು<br>45. 16. ಮೇನ್ ರೋಡ್<br>ಮಾರುತಿ ಲೇಔಟ್ ವಿಜಯನಗರ<br>ಬೆಂಗಳೂರು -560040. ಇವರಿಂದ<br>ಜಿ.ಪಿ.ಎ.ಅಧಿಕಾರ ಹೊಂದಿದ<br>3)ವೆಂಕಟಮಾಣಿಕ್ಕಮ್ಮ ಗಂಡ ಲೇಟ್ ವೀರಣ್ಣ ಶೆಟ್ಟಿ<br>ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು | ಎಂ.ಸತೀಶ್‌ಕುಮಾರ ತಂದೆ ಎಂ.ವೀರಣ್ಣ ಶೆಟ್ಟಿ<br>ಮೇನ್‌ರೋಡ್ ಕೊಟ್ಟೂರು<br>ಎಲ್.ಐ.ಸಿ. ಏಜೆಂಟ್ ಕೊಟ್ಟೂರು ಪಟ್ಟಣ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 576/1. ವಿಸ್ತೀರ್ಣ 3-50. ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 576/1. ವಿಸ್ತೀರ್ಣ 3-50. ಎಕ್ರೆ ಜಮೀನನ್ನು ಬೆಂಗಳೂರು ನಗರದ ಸುಬ್ಬರತ್ನಮ್ಮ ಗಂಡ ವೆಂಟಕಟಪ್ಪ ಶೆಟ್ರು ಇವರಿಂದ ಜನರಲ್ ಫವರ್ ಆಫ್ ಅಟಾರ್ನಿ (ಜಿ.ಪಿ.ಎ) ಅಧಿಕಾರ ಹೊಂದಿದ ಕೊಟ್ಟೂರು ಪಟ್ಟಣದ ವೆಂಕಟಮಾಣಿಕ್ಕಮ್ಮ ಗಂಡ ಲೇಟ್ ವೀರಣ್ಣಶೆಟ್ಟಿ ಇವರಿಂದ ಸದರಿ ತಾಲೂಕು ಹರಾಳು ಗ್ರಾಮದ ಕೆ.ಕೊಟ್ರೇಶಪ್ಪ ತಂದೆ ಲೇಟ್ ಕೊಟ್ರಗೌಡ್ರ ಕೊಟ್ರಬಸಪ್ಪ. ಇವರು ದಿನಾಂಕ: 15-04-2016. ರ ಡಾಕ್ಯುಮೆಂಟ್ ನಂಬರ್: 143/2016-17. ರ ಪ್ರಕಾರ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೆ.ಅಯ್ಯನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 20-04-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಎಂ.ಸತೀಶ್‌ಕುಮಾರ ತಂದೆ ಎಂ.ವೀರಣ್ಣ ಶೆಟ್ಟಿ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 92/2015-16. ದಿನಾಂಕ 21-05-2016 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 26-07-2016. ರಿಂದ 20-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 576/1. ವಿಸ್ತೀರ್ಣ 3-50. ಎಕ್ರೆ ಜಮೀನನ್ನು ಬೆಂಗಳೂರು ನಗರದ

ಮು.ತಿ.ನೋ-2

ಸುಬ್ಬರತ್ನಮ್ಮ ಗಂಡ ವೆಂಕಟಪ್ಪಶೆಟ್ರು ಇವರಿಂದ ಜನರಲ್ ಫವರ್ ಆಫ್ ಅಟಾರ್ನಿ (ಜಿ.ಪಿ.ಎ.)ಅಧಿಕಾರ ಹೊಂದಿದ ಕೊಟ್ಟೂರು ಪಟ್ಟಣದ ವೆಂಕಟಮಣಿಕ್ಕಮ್ಮ ಗಂಡ ಲೇಟ್ ವೀರಣ್ಣಶೆಟ್ಟಿ ಇವರಿಂದ ದಿನಾಂಕ 15-04-2016. ರ ಡಾಕ್ಯುಮೆಂಟ್ ನಂಬರ್: 143/2016-17. ರ ಪ್ರಕಾರ ರೂ: 3.08.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ. ಹಾಗೂ ಸದರಿ ಜಮೀನನ್ನು ಹರಾಳು ಗ್ರಾಮದ ಸೊಪ್ಪಿನ ಗೋಣೆಪ್ಪನ ಮಗ ಬಸಪ್ಪ ಇವರಿಂದ ಖರೀದಿಸಿದ ಜಮೀನಾಗಿರುವುದರಿಂದ ಅದರಲ್ಲಿ ತಕರಾರುದಾರರಿಗೆ ಯಾವುದೇ ಹಕ್ಕಿಲ್ಲವೆಂದು ತಿಳಿಸಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ದಿನಾಂಕ 07-05-2000 ರಲ್ಲಿ ಪಾಲು ವಿಭಾಗ ಮಾಡುವಾಗ ಎಲ್ಲರ ಸಮಕ್ಷಮದಲ್ಲಿ ನನ್ನ ಭಾಗಕ್ಕೆ ಬಿಟ್ಟು ಕೊಟ್ಟಿರುತ್ತಾರೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ತಕರಾರು ಇರುವುದಾಗಿ ಕೋರಿರುತ್ತಾರೆ.

ದಿನಾಂಕ: 20-09-2016 ರ ವಿಚಾರಣೆಯಲ್ಲಿ ಉಭಯರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನ ಬಗ್ಗೆ ಉಭಯರು ರಾಜೀಯಾಗಿ ತಕರಾರುದಾರರು ಸದರಿ ಜಮೀನಿನ ಬಗ್ಗೆ ತಕರಾರು ಸಲ್ಲಿಸಿದ್ದು ನಿಜವಿದ್ದು ಈಗ ನಾನು ತಕರಾರು ಅರ್ಜಿಯನ್ನು ವಾಪಸ್ಸು ಪಡೇದಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಹೇಳಿಕೆ ಹಾಗೂ ಲಿಖಿತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ತಕರಾರು ಅರ್ಜಿಯನ್ನು ವಾಪಸ್ಸು ಪಡೆದಿರುವುದರಿಂದ ನೊಂದಾಯಿತ ಕ್ರಯ ಪತ್ರದನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 576/1. ವಿಸ್ತೀರ್ಣ 3-50. ಎಕ್ರೆ ಜಮೀನನ್ನು ದಿನಾಂಕ: 15-04-2016 ರ ಡಾಕ್ಯುಮೆಂಟ್ ನಂಬರ್: 143/2016-17. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಕೆ.ಕೊಟ್ರೇಶಪ್ಪ ತಂದೆ ಲೇಟ್ ಕೊಟ್ರಗೌಡ್ರ ಕೊಟ್ರಬಸಪ್ಪ ಹರಾಳು ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು,
ನಾಡಕಛೇರಿ, ಕೊಟ್ಟೂರು
ಹೋ-3

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೆ.ಕೊಟ್ರೇಶಪ್ಪ ತಂದೆ ಲೇಟ್ ಕೊಟ್ರಗೌಡ್ರ ಕೊಟ್ರಬಸಪ್ಪ. ಹರಾಳು ಗ್ರಾಮ ಕೂಡ್ಲಿಗಿ ತಾಲೂಕು ಸುಬ್ಬರತ್ನಮ್ಮ ಗಂಡ ವೆಂಕಟಪ್ಪ ಶೆಟ್ರು 45. 16.ಮೇನ್. ರೋಡ್ ಮಾರುತಿ ಲೇಔಟ್ ವಿಜಯನಗರ ಬೆಂಗಳೂರು–560040. ವೆಂಕಟಮಣಿಕ್ಕಮ್ಮ ಗಂಡ ಲೇಟ್ ವೀರಣ್ಣ ಶೆಟ್ಟಿ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎಂ.ಸತೀಶ್‌ಕುಮಾರ ತಂದೆ ಎಂ.ವೀರಣ್ಣ ಶೆಟ್ಟಿ ಮೇನ್ ರೋಡ್ ಎಲ್.ಐ.ಸಿ.ಏಜೆಂಟ್ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ಉಪತಹಶೀಲ್ದಾರರು ನಾಡ ಕಾರ್ಯಾಲಯ * ಕೊಟ್ಟೂರು *